**All India Radio: Bangalore**
**National Bulletin In Kannada**
**06.10.2026 07.35 a.m.**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**06.10.2026 07.35 a.m.**

---

ಮುಖ್ಯಾಂಶಗಳು

೧. ತಮಿಳುನಾಡು, ಪುದುಚೇರಿ, ಪಶ್ಚಿಮ ಬಂಗಾಳದ ಐದು ವಿಧಾನಸಭಾ ಕ್ಷೇತ್ರಗಳು, ಅಸ್ಸಾಂನ ಒಂದು ಲೋಕಸಭಾ ಕ್ಷೇತ್ರಕ್ಕೆ ಇಂದು ಉಪಚುನಾವಣೆ; ಮತದಾನ ಪ್ರಗತಿಯಲ್ಲಿ

೨. ಕಾರ್ಲ್ ಡಿಸೇರೊತ್, ಪೀಟರ್ ಹೆಗೆಮನ್, ಜಾರ್ಜ್ ನಾಗೆಲ್‌ಗೆ ಒಲಿದ ೨೦೨೬ರ ವೈದ್ಯಕೀಯ ನೊಬೆಲ್ ಪ್ರಶಸ್ತಿ

೩. ಅಂತಾರಾಷ್ಟ್ರೀಯ ಖಗೋಳ ಮತ್ತು ಖಗೋಳ ಭೌತಶಾಸ್ತ್ರ ಒಲಿಂಪಿಯಾಡ್; ಭಾರತಕ್ಕೆ ೪ ಚಿನ್ನ, ಒಂದು ಬೆಳ್ಳಿ ಪದಕ

೪. ಜಪಾನ್ ಓಪನ್ ಟೆನಿಸ್: ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿಂದು ಕಾರ್ಲೋಸ್ ಅಲ್ಕರಾಜ್-ಜಿರಿ ಲೆಹೆಕಾ ಮುಖಾಮುಖಿ

---

ತಮಿಳುನಾಡು, ಪುದುಚೇರಿ ಮತ್ತು ಪಶ್ಚಿಮ ಬಂಗಾಳದ ಐದು ವಿಧಾನಸಭಾ ಕ್ಷೇತ್ರಗಳು ಹಾಗೂ ಅಸ್ಸಾಂನ ಒಂದು ಲೋಕಸಭಾ ಕ್ಷೇತ್ರಕ್ಕೆ ಇಂದು ಉಪಚುನಾವಣೆ ನಡೆಯುತ್ತಿದೆ.

ತಮಿಳುನಾಡಿನ ಮಧುರಾಂತಕಂ ಮತ್ತು ಧಾರಾಪುರಂ, ಪುದುಚೇರಿಯ ತಟ್ಟಂಚಾವಡಿ ಹಾಗೂ ಪಶ್ಚಿಮ ಬಂಗಾಳದ ರೆಜಿನಗರ ಮತ್ತು ನಂದಿಗ್ರಾಮ ವಿಧಾನಸಭಾ ಕ್ಷೇತ್ರಗಳು ಹಾಗೂ ಅಸ್ಸಾಂನ ನಾಗಾಂ ಲೋಕಸಭಾ ಕ್ಷೇತ್ರದಲ್ಲಿ ಮತದಾನ ಪ್ರಗತಿಯಲ್ಲಿದೆ.

ಮತ ಎಣಿಕೆ ಕಾರ್ಯ ಶುಕ್ರವಾರ ನಡೆಯಲಿದೆ.

---

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಮೂರು ದಿನಗಳ ಕಾಲ ಹಿಮಾಚಲ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ಬಿಲಾಸಪುರದ ಏಮ್ಸ್ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿರುವ ಅವರು, ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ.

ಘಟಿಕೋತ್ಸವದ ಬಳಿಕ ರಾಷ್ಟ್ರಪತಿಯವರು ಮನಾಲಿಗೆ ತೆರಳಿ ಅಲ್ಲಿಯೇ ರಾತ್ರಿ ವಾಸ್ತವ್ಯ ಹೂಡಲಿದ್ದಾರೆ. ನಾಳೆ ಹಿಡಿಂಬಾ ದೇವಾಲಯ ಮತ್ತು ಅಟಲ್ ಸುರಂಗ-ರೋಹ್ತಾಂಗ್‌ಗೆ ಭೇಟಿ ನೀಡುವ ನಿರೀಕ್ಷೆಯಿದೆ. ರಾಷ್ಟ್ರಪತಿಯವರು ನಾಡಿದ್ದು, ನವದೆಹಲಿಗೆ ಮರಳಲಿದ್ದಾರೆ.

---

ನವದೆಹಲಿಯಲ್ಲಿ ಇಂದು ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಅತ್ಯುತ್ತಮ ಶೈಕ್ಷಣಿಕ ಸಾಧನೆ ಮಾಡಿದ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಪರಾಷ್ಟ್ರಪತಿಯವರು, ಶಂಕರ್ ದಯಾಳ್ ಶರ್ಮಾ ಸ್ಮಾರಕ ಪದಕಗಳನ್ನು ಪ್ರದಾನ ಮಾಡಲಿದ್ದಾರೆ

ಕಾರ್ಯಕ್ರಮದಲ್ಲಿ ೧೪೦ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿಗಳನ್ನು ಹಾಗೂ ೨೦೨೪, ೨೦೨೫ ಮತ್ತು ೨೦೨೬ನೇ ಸಾಲಿನ ೬೦ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್ ಮುರಳಿಮನೋಹರ್ ಪಾಠಕ್ ಮಾಹಿತಿ ನೀಡಿದ್ದಾರೆ.

---

ಮೆದುಳಿನ ಅಧ್ಯಯನ ಕುರಿತಾದ ಸಂಶೋಧನೆಗಳಿಗಾಗಿ ಅಮೆರಿಕದ ಕಾರ್ಲ್ ಡಿಸೇರೊತ್, ಜರ್ಮನ್‌ನ ಪೀಟರ್ ಹೆಗೆಮನ್ ಮತ್ತು ಜಾರ್ಜ್ ನಾಗೆಲ್ ಅವರು ಪ್ರತಿಷ್ಠಿತ ೨೦೨೬ರ ವೈದ್ಯಕೀಯ ನೊಬೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬೆಳಕಿನ ಮೂಲಕ ನಿಯಂತ್ರಿಸಬಹುದಾದ ಅಯಾನ್ ಚಾನೆಲ್‌ಗಳು ಮತ್ತು ಮೆದುಳಿನ ಅಧ್ಯಯನದಲ್ಲಿ ಮಹತ್ವದ ಬದಲಾವಣೆ ತಂದ ಆಪ್ಟೋಜೆನೆಟಿಕ್ಸ್ ತಂತ್ರದ ಕುರಿತ ಸಂಶೋಧನೆಗಾಗಿ ಈ ಗೌರವ ಸಂದಿದೆ.

ಆಪ್ಟೋಜೆನೆಟಿಕ್ಸ್ ಮೂಲಕ ಜೀವಂತ ಮೆದುಳಿನಲ್ಲಿರುವ ನಿರ್ದಿಷ್ಟ ನರಕೋಶಗಳ ಚಟುವಟಿಕೆಯನ್ನು ಬೆಳಕಿನ ಮೂಲಕ ನಿಯಂತ್ರಿಸಲು ಸಾಧ್ಯವಾಗಿದ್ದು, ಮೆದುಳಿನ ನೆನಪು, ಭಾವನೆ ಮತ್ತು ನಡವಳಿಕೆಗಳ ಅಧ್ಯಯನಕ್ಕೆ ಹೊಸ ದಾರಿ ತೆರೆದಿದೆ.

---

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿಶಾಖಪಟ್ಟಣದ ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ನೌಕಾಪಡೆಯ ಫ್ಲೀಟ್ ಸಪೋರ್ಟ್ ಶಿಪ್-೧ ಉದ್ಘಾಟನೆ ಹಾಗೂ ಫ್ಲೀಟ್ ಸಪೋರ್ಟ್ ಶಿಪ್-೫ರ ಕೀಲ್ ಅಳವಡಿಕೆಗೆ ಇಂದು ಚಾಲನೆ ನೀಡಲಿದ್ದಾರೆ.

ಇದೇ ವೇಳೆ ಅವರು ನವೀಕರಿಸಲಾದ ಸ್ಲಿಪ್‌ವೇ-೪ ಮತ್ತು ೩೦೦ ಟನ್ ಸಾಮರ್ಥ್ಯದ ಗೋಲಿಯತ್ ಕ್ರೇನ್ ಲೋಕಾರ್ಪಣೆಗೊಳಿಸಲಿದ್ದಾರೆ.

ಭಾರತೀಯ ನೌಕಾಪಡೆಗಾಗಿ ನಿರ್ಮಿಸಲಾಗುತ್ತಿರುವ ಐದು ಫ್ಲೀಟ್ ಸಪೋರ್ಟ್ ಶಿಪ್‌ಗಳಲ್ಲಿ ಮೊದಲನೆಯದಾದ ಎಫ್‌ಎಸ್‌ಎಸ್-೧, ಮುಂದಿನ ೧೮ ತಿಂಗಳಲ್ಲೇ ಬಂಗಾಳ ಕೊಲ್ಲಿಯಲ್ಲಿ ನಿಯೋಜನೆಗೊಳ್ಳಲಿದೆ.

೪೩ ಸಾವಿರದ ೫೦೦ ಟನ್ ತೂಕದ ಈ ಹಡಗುಗಳು ಸಮುದ್ರದಲ್ಲಿರುವ ಯುದ್ಧನೌಕೆಗಳಿಗೆ ಅಗತ್ಯ ಸಾಮಗ್ರಿ ಪೂರೈಸುವ ಮೂಲಕ ಹಿಂದೂ ಮಹಾಸಾಗರ ಪ್ರದೇಶದಲ್ಲಿ ನೌಕಾಪಡೆಯ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸಲಿವೆ.

---

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, 'ಜನ ಸೇವೆಯೇ ದೇಶ ಸೇವೆ' ಎಂಬ ಅಭಿಯಾನ ನಡೆಯುತ್ತಿದೆ.

ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ '೩೭೦ನೇ ವಿಧಿ ರದ್ದು; ಒಂದು ದೇಶ ಒಂದು ಸಂವಿಧಾನ' ಕುರಿತ ಒಂದು ವರದಿ ಇಲ್ಲಿದೆ.

೩೭೦ನೇ ವಿಧಿಯು ಎಪ್ಪತ್ತು ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ಯಾವುದೇ ಸರ್ಕಾರವೂ ಆ ವಿಷಯದ ಗೋಜಿಗೆ ಹೋಗಲಿಲ್ಲ. ಅದಕ್ಕೆ ಕಾರಣ ಅವರು ಆ ವಿಧಿಯ ಪರವಾಗಿದ್ದರು ಎಂದಲ್ಲ, ಬದಲಿಗೆ ಅದನ್ನು ರದ್ದುಗೊಳಿಸುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಅವರಿಗಿದ್ದ ಭಯವೇ ಕಾರಣವಾಗಿತ್ತು.

೨೦೧೬ರಲ್ಲಿ ಕಾಶ್ಮೀರ ಕಣಿವೆಯಲ್ಲಿ ಸುದೀರ್ಘ ೫೧ ದಿನಗಳ ಕಾಲ ಕರ್ಫ್ಯೂ ಜಾರಿಯಲ್ಲಿತ್ತು. ಕೇವಲ ಒಬ್ಬ ವ್ಯಕ್ತಿಯ ಹತ್ಯೆಯ ಕಾರಣದಿಂದಾಗಿ ಅಲ್ಲಿನ ಶಾಲೆಗಳು ಎಂಟು ತಿಂಗಳ ಕಾಲ ಮುಚ್ಚಲ್ಪಟ್ಟಿದ್ದವು. ಎಲ್ಲರೂ ಗೊಂದಲ ಅಥವಾ ಅಶಾಂತಿ ಉಂಟಾಗಬಹುದೆಂದು ನಿರೀಕ್ಷಿಸಿದ್ದರು.

ಯಾವುದೇ ಹಿಂಸಾಚಾರವನ್ನು ನಿಯಂತ್ರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಲವಾದ ಯೋಜನೆಯನ್ನು ಸಿದ್ಧಪಡಿಸಿತ್ತು. ಘೋಷಣೆ ಮತ್ತು ಅದರ ಅನುಷ್ಠಾನದ ನಡುವೆ ಯಾವುದೇ ಅಂತರವಿರದಂತೆ, ಒಂದೇ ದಿನದಲ್ಲಿ ರಾಷ್ಟ್ರಪತಿಗಳ ಆದೇಶ, ಸಂಸತ್ತಿನ ನಿರ್ಣಯ ಮತ್ತು ಕಾಯ್ದೆಯನ್ನು ಮಂಡಿಸಲಾಯಿತು.

ಆ ಬೇಸಿಗೆಯು ಶಾಂತಿಯುತವಾಗಿ ಕಳೆಯಿತು. ೩೭೦ನೇ ವಿಧಿಯು ಯಾವಾಗಲೂ ಒಂದು ತಾತ್ಕಾಲಿಕ ನಿಬಂಧನೆಯಾಗಿಯೇ ಇತ್ತು ಎಂದು ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ೨೦೨೩ರ ಡಿಸೆಂಬರ್‌ನಲ್ಲಿ ಈ ಸಂಪೂರ್ಣ ಪ್ರಕ್ರಿಯೆಯನ್ನು ಎತ್ತಿಹಿಡಿಯಿತು. ನಂತರ ೨೦೨೪ರಲ್ಲಿ ವಿಧಾನಸಭೆ ಚುನಾವಣೆಗಳು ನಡೆದವು; ಇವು ಒಂದು ದಶಕದ ಅವಧಿಯಲ್ಲಿ ನಡೆದ ಮೊದಲ ಚುನಾವಣೆಗಳಾಗಿದ್ದವು.

೧೯೪೯ರಲ್ಲೇ ಈ ವಿಧಿಯನ್ನು 'ತಾತ್ಕಾಲಿಕ' ಎಂದು ಕರೆಯಲಾಗಿತ್ತು. ಆದರೆ ಅದನ್ನು ಆ ರೀತಿಯಾಗಿ ಪರಿಗಣಿಸಲು ಎಪ್ಪತ್ತು ವರ್ಷಗಳೇ ಬೇಕಾಯಿತು.

---

ವಿಯೆಟ್ನಾಂನ ಹನೋಯಿಯಲ್ಲಿ ನಡೆದ ೧೮ನೇ ಅಂತಾರಾಷ್ಟ್ರೀಯ ಖಗೋಳ ಮತ್ತು ಖಗೋಳ ಭೌತಶಾಸ್ತ್ರ ಒಲಿಂಪಿಯಾಡ್‌ನಲ್ಲಿ ಭಾರತ ೪ ಚಿನ್ನ ಹಾಗೂ ೧ ಬೆಳ್ಳಿ ಪದಕ ಗೆದ್ದಿದೆ.

ಸೆಪ್ಟೆಂಬರ್ ೨೫ರಿಂದ ಅಕ್ಟೋಬರ್ ೫ರವರೆಗೆ ನಡೆದ ಈ ಸ್ಪರ್ಧೆಯಲ್ಲಿ ಭಾರತದ ರಾಷ್ಟ್ರೀಯ ತಂಡದ ಎಲ್ಲ ೫ ಸದಸ್ಯರು ಪದಕ ಗಳಿಸಿದ್ದಾರೆ.

ಹೈದರಾಬಾದ್‌ನ ಪ್ರಾಂಜಲ್ ದೀಕ್ಷಿತ್, ದೆಹಲಿಯ ಸುಮಂತ್ ಗುಪ್ತಾ, ಗುರುಗ್ರಾಮದ ಅಕ್ಷತ್ ಶ್ರೀವಾಸ್ತವ ಮತ್ತು ಫರಿದಾಬಾದ್‌ನ ಅರ್ನವ್ ಸೆಹ್ರಾವತ್ ಚಿನ್ನದ ಪದಕ ಗೆದ್ದಿದ್ದಾರೆ. ವಡೋದರದ ಹರ್ಷಿಲ್ ಅಮಿತ್‌ಕುಮಾರ್ ಪಟೇಲ್ ಬೆಳ್ಳಿ ಪದಕ ಗಳಿಸಿದ್ದಾರೆ.

ಪದಕ ಪಟ್ಟಿಯಲ್ಲಿ ಭಾರತ ವಿಯೆಟ್ನಾಂನೊಂದಿಗೆ ಜಂಟಿಯಾಗಿ ೩ನೇ ಸ್ಥಾನ ಪಡೆದಿದೆ. ತಲಾ ೫ ಚಿನ್ನದ ಪದಕ ಗೆದ್ದ ಇರಾನ್ ಮತ್ತು ದಕ್ಷಿಣ ಕೊರಿಯಾ ಮೊದಲ ಸ್ಥಾನದಲ್ಲಿವೆ. ೬೪ ದೇಶಗಳ ೩೦೭ ವಿದ್ಯಾರ್ಥಿಗಳು ಭಾಗವಹಿಸಿದ್ದು, ಈವರೆಗಿನ ಅತಿ ಹೆಚ್ಚು ಭಾಗವಹಿಸುವಿಕೆಯ ಒಲಿಂಪಿಯಾಡ್ ಇದಾಗಿದೆ.

---

ವಿಶ್ವ ವೇದಿಕೆಯಲ್ಲಿ ಜಾಗತಿಕ ದಕ್ಷಿಣ ರಾಷ್ಟ್ರಗಳ ಕಳವಳಗಳನ್ನು ಭಾರತ ಪ್ರತಿಪಾದಿಸಬೇಕೆಂದು ಜಾಗತಿಕ ದಕ್ಷಿಣ ನಿರೀಕ್ಷಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್ ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ೫ನೇ ಕೌಟಿಲ್ಯ ಆರ್ಥಿಕ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಆಹಾರ, ಇಂಧನ, ರಸಗೊಬ್ಬರ, ಹಣಕಾಸು ಸೇರಿದಂತೆ ಜಾಗತಿಕ ದಕ್ಷಿಣ ರಾಷ್ಟ್ರಗಳ ಪ್ರಮುಖ ಕಳವಳಗಳನ್ನು ಭಾರತ ವಿಶ್ವ ವೇದಿಕೆಯಲ್ಲಿ ಅನಾವರಣಗೊಳಿಸುತ್ತದೆ ಎಂದರು.

______________

ಅಸ್ಸಾಂನ ದಿಬ್ರುಗಢದಿಂದ ಬಾಂಗ್ಲಾದೇಶಕ್ಕೆ ಮೆಥನಾಲ್ ಸಾಗಿಸುವ ಮೊದಲ ಅಂತಾರಾಷ್ಟ್ರೀಯ ಸರಕು ಹಡಗಿಗೆ ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ನಿನ್ನೆ ಚಾಲನೆ ನೀಡಿದರು.

ಇದರೊಂದಿಗೆ ಸುಮಾರು ೮೦ ವರ್ಷಗಳ ಬಳಿಕ ಬ್ರಹ್ಮಪುತ್ರ ನದಿ ಜಾಗತಿಕ ವ್ಯಾಪಾರ ಮಾರ್ಗವಾಗಿ ಪುನಶ್ಚೇತನಗೊಂಡಿದೆ.

ದಿಬ್ರುಗಢದ ಬೋಗಿಬೀಲ್ ಟರ್ಮಿನಲ್‌ನಿಂದ ಬಾಂಗ್ಲಾದೇಶದ ಢಾಕಾದ ಪಾಂಗಾವ್ ಬಂದರಿಗೆ ಮೆಥನಾಲ್ ಸಾಗಿಸಲಾಗುತ್ತಿದೆ.

______________

ಟೋಕಿಯೋದಲ್ಲಿ ಇಂದು ನಡೆಯಲಿರುವ ಜಪಾನ್ ಓಪನ್ ಟೆನಿಸ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ವಿಶ್ವದ ೩ನೇ ಶ್ರೇಯಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್, ೧೯ನೇ ಶ್ರೇಯಾಂಕದ ಜಿರಿ ಲೆಹೆಕಾ ಅವರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ, ಅಮೆರಿಕದ ಆಸ್ಟಿನ್ ಕ್ರಜಿಚೆಕ್ ಮತ್ತು ಕ್ರೊಯೇಷಿಯಾದ ನಿಕೋಲಾ ಮೆಕ್ಟಿಕ್ ಜೋಡಿ, ಫ್ರಾನ್ಸ್‌ನ ಥಿಯೋ ಅರಿಬಾಗೆ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿಯನ್ನು ಎದುರಿಸಲಿದೆ.

______________

ಲಕ್ನೋದ ಭಾರತರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ನಡುವಿನ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಅಂತಾರಾಷ್ಟ್ರೀಯ ಸರಣಿಯ ಮೊದಲ ಪಂದ್ಯ ನಡೆಯಲಿದೆ.

ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಆರಂಭವಾಗಲಿದೆ.

_______ ಮುಕ್ತಾಯ _____